ಪ್ರತಿಬಿಂಬ
PRATIBIMBA – Multidisciplinary Kannada Research Journal of IIMRD
ISSN (E): 2582-2284
Vol-1 Issue 1, July-August 2019, 89-93
©IIMRD, Mysuru
IIMRD JOURNALS
www.iimrd.com

# ಪ್ರೌಢ ಶಾಲಾ ಹೆಣ್ಣು ಮಕ್ಕಳ ಶೈಕ್ಷಣಿಕ ಅಭಿವೃದ್ಧಿಯಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಪಾತ್ರ: ಒಂದು ಅಧ್ಯಯನ

ಡಾ. ಬಿ.ರವಿ[1]

**ಪೀಠಿಕೆ:**

ಭಾರತದಲ್ಲಿ ಹಲವಾರು ಸಮಸ್ಯೆಗಳು ಪ್ರಸ್ತುತದಲ್ಲಿಯೂ ತಾಂಡವಾಡುತ್ತಿವೆ. ಇಂತಹ ಸಮಸ್ಯೆಗಳ ಆಗರದಲ್ಲಿ ಗೋಚರವಾಗುವಂತಹ ಒಂದು ಗುಂಪು ಮಹಿಳೆಯರು ಮತ್ತು ಹೆಣ್ಣು ಮಕ್ಕಳು. ಆರೋಗ್ಯ, ಮಹಿಳೆಯರ ಮೇಲಿನ ದೌರ್ಜನ್ಯ, ಲಿಂಗತಾರತಮ್ಯ, ಶೈಕ್ಷಣಿಕ ಸಮಸ್ಯೆಗಳು, ಮಹಿಳೆಯರ ಮೇಲಿನ ಸಾಂಪ್ರದಾಯಿಕ ಪಿಡುಗುಗಳು ಮುಂತಾದ ಸಮಸ್ಯೆಗಳು ಇನ್ನೂ ಜೀವಂತವಾಗಿಯೇ ಉಳಿದಿವೆ. ಈ ಸಮಸ್ಯೆಗಳನ್ನು ನಿರ್ಮೂಲನೆ ಮಾಡಲು ಮತ್ತು ಹೆಣ್ಣು ಮಕ್ಕಳನ್ನು ಶೈಕ್ಷಣಿಕವಾಗಿ ಅಭಿವೃದ್ಧಿಗೊಳಿಸುವಲ್ಲಿ ಸ್ವಾತಂತ್ರ್ಯ ಪೂರ್ವ ಹಾಗೂ ಸ್ವಾತಂತ್ರ್ಯ ನಂತರದಿಂದಲೂ ಸರ್ಕಾರ ಮತ್ತು ಹಲವಾರು ನಾಗರಿಕ ಸೇವಾ ಸಂಸ್ಥೆಗಳು ಶ್ರಮಿಸುತ್ತಾ ಬಂದಿದ್ದರು ಕೂಡ ಮಹಿಳೆಯರ ಮೇಲಿನ ಸಾಂಪ್ರದಾಯಿಕ ಪಿಡುಗುಗಳ ನಿರ್ಮೂಲನೆ ಹಾಗೂ ಹೆಣ್ಣು ಮಕ್ಕಳ ಶೈಕ್ಷಣಿಕ ಅಭಿವೃದ್ಧಿಯಲ್ಲಿ ಸಫಲತೆಯನ್ನು ಕಾಣಲು ಕೇಂದ್ರ ಹಾಗೂ ರಾಜ್ಯದ ಎಲ್ಲೆಡೆ ಸಾದ್ಯವಾಗಿಲ್ಲ ಇದಕ್ಕೆ ಕಾರಣಗಳಾದರೂ ಏನು? ಪುರುಷ ಪ್ರದಾನ್ಯತೆಯೇ, ಕಾನೂನುಗಳ ವೈಫಲ್ಯತೆಯೇ? ಶಾಲೆಯಲ್ಲಿ ಮಕ್ಕಳನ್ನು ಆಕರ್ಷಿಸಿ ಉಳಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲವೇ? ಹತ್ತಿರದಲ್ಲಿ ಶಾಲಾ ಕಾಲೇಜುಗಳಿಲ್ಲದಿರುವಿಕೆಯೇ? ಪೋಷಕರ ಅನಾಶಕ್ತಿಯೇ? ಪ್ರೌಢ ಹಂತದ ಹೆಣ್ಣು ಮಕ್ಕಳ ಆರೋಗ್ಯ ಸಮಸ್ಯೆಯೇ? ಎಂಬಂತಹ ಪ್ರಶ್ನೆಗಳು ನಮ್ಮ ಕಣ್ಮುಂದೆ ಎಳುತ್ತವೆ.

1961ರ ಭಾರತದಲ್ಲಿ 1 ರಿಂದ 5 ನೇ ತರಗತಿಯಲ್ಲಿ ಶೇಕಡ 41.40 ರಷ್ಟು ಇದ್ದಂತಹ ದಾಖಲಾತಿ 2003–04 ರ ವೇಳೆಗೆ 95.58% ಹೆಚ್ಚಾಯಿತ್ತೆಂದು ಒಂದು ಕಡೆ ಹೆಮ್ಮೆ ಪಡುವಂತಹ ವಿಷಯವಾದರೆ ಇನ್ನೊಂದೆಡೆ ಶಿಕ್ಷಣದ ಮಟ್ಟ ಹೆಚ್ಚಾದಂತೆಲ್ಲಾ ಶಾಲಾ ದಾಖಲಾತಿಯು ಹಂತ ಹಂತವಾಗಿ ಇಳಿಮುಖವಾಗುತ್ತಾ ಹೋಗುತ್ತಿರುವುದನ್ನು ಗಮನಿಸಬಹುದು. ಪ್ರೌಢ ಶಾಲಾ ಹಂತದಲ್ಲಿ 1961 ರಲ್ಲಿ ಶೇಕಡ 4 ರಷ್ಟಿದ್ದಾಂತಹ ಶಾಲಾ ದಾಖಲಾತಿ 2003–04 ರ ವೇಳೆಗೆ ಶೇಕಡ 34 ರಷ್ಟು ಏರಿತಷ್ಟೆ ಹೀಗೆ ಪ್ರಾಥಮಿಕ ಹಾಗೂ ಪ್ರೌಢ ಶಾಲಾ ದಾಖಲಾತಿಗೆ ಹೋಲಿಕೆ ಮಾಡಿ ನೋಡಿದರೆ ಗಣನೀಯ ಪ್ರಮಾಣದಲ್ಲಿ ಇಳಿಮುಖವಾಗುತ್ತಿರುವುದು ಒಂದೆಡೆಯಾದರೆ ಈ ಅವಧಿಯಲ್ಲಿಯೇ ಶೇಕಡ 42 ರಷ್ಟು ಪ್ರೌಢ ಶಾಲೆಯ ಹಂತದಲ್ಲಿನ ಹೆಣ್ಣು ಮಕ್ಕಳು ಶಾಲೆಯಿಂದ ಹೊರಗಿದ್ದಾರೆ ಹಾಗೂ ಅರ್ಧದಲ್ಲಿಯೇ ಶಾಲೆ ಬಿಟ್ಟವರು ಕೂಡ

[1] *ಸಹಾಯಕ ಪ್ರಾಧ್ಯಪಕರು, ಸಮಾಜಶಾಸ್ತ್ರ ಅಧ್ಯಯನ, ಪಿ.ಆರ್.ಎಂ ವಿಜಯ ಪ್ರಥಮ ದರ್ಜೆ ಕಾಲೇಜು, ಟಿ. ನರಸೀಪುರ*

ಇದ್ದಾರೆ ಹಾಗೆಯೇ ನಮ್ಮ ಕರ್ನಾಟಕ ರಾಜ್ಯದಲ್ಲಿ 2009–10ರ ಅಂಕಿ ಅಂಶಗಳಂತೆ ಶೇಕಡ 11.40 ರಷ್ಟು ಹೆಣ್ಣು ಮಕ್ಕಳು ಮಾತ್ರ ಪ್ರೌಢ ಶಾಲೆಗೆ ದಾಖಲಾಗಿದ್ದಾರೆ.

ಮೇಲ್ಕಂಡ ಅಂಕಿ ಅಂಶಗಳನ್ನು ಗಮನಿಸಿದರೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಜೊತೆಗೆ ಹಲವಾರು ನಾಗರೀಕ ಸೇವಾ ಸಂಸ್ಥೆಗಳು ಹೆಣ್ಣು ಮಕ್ಕಳ ಶೈಕ್ಷಣಿಕ ಅಭಿವೃದ್ದಿಗೆ ಹತ್ತು ಹಲವಾರು ಯೋಜನೆಗಳು ಕಾರ್ಯಕ್ರಮಗಳು, ಆಯೋಗಗಳು ಬಂದು ಹೋಗಿದ್ದರೂ ಕೂಡ ಕೇಂದ್ರ ಹಾಗೂ ರಾಜ್ಯದೇಲ್ಲೆಡೆ ಸಂಪೂರ್ಣವಾಗಿ ಸಮಯಕ್ಕೆ ಸರಿಯಾಗಿ ಸಂಪನ್ಮೂಲಗಳು ಲಭ್ಯವಾಗದೆ ಪ್ರಾದೇಶಿಕ ಅಸಮಾನತೆಯಿಂದ ಹೆಣ್ಣು ಮಕ್ಕಳ ದಾಖಲಾತಿಯಲ್ಲಿ ಒಂದು ಹಂತದಿಂದ ಮತ್ತೊಂದು ಹಂತದ ಮುಂದುವರಿಕೆಯಲ್ಲಿ ಏರಿಳಿತಗಳು ಪ್ರಸ್ತುತದಲ್ಲಿಯೂ ಕೂಡ ಕಂಡು ಬರುತ್ತಿದೆ. ಹೆಣ್ಣು ಮಕ್ಕಳು ಪ್ರೌಢ ಶಾಲಾ ಹಂತದವರೆಗಾದರೂ ಶಾಲಾ ಕಾಲೇಜಿನಲ್ಲಿಯೇ ಉಳಿದರೆ ಅವರ ಮೇಲಾಗುವಂತಹ ಮಾನಸಿಕ ದೈಹಿಕ ಹಾಗೂ ಚಿಕ್ಕವಯಸ್ಸಿನಲ್ಲಿಯೇ ತಾಯ್ತತನದ ಜವಬ್ದಾರಿಯಂತಹ ಒತ್ತಡಗಳಿಂದ ದೂರ ಉಳಿಯಲು ಅವಕಾಶವಾಗುತ್ತದೆ. ಶೈಕ್ಷಣಿಕವಾಗಿ ಅಭಿವೃದ್ಧಿ ಸಾಧಿಸುತ್ತಿರುವ ನಮ್ಮ ಪಕ್ಕದ ರಾಜ್ಯವಾದ ಕೇರಳದಲ್ಲಿ 16 ರಿಂದ 18 ನೇ ವಯಸ್ಸಿನವರೆಗೆ ಶೈಕ್ಷಣಿಕವಾಗಿ ಮುಂದುವರೆಯುತ್ತಿದ್ದಾರೆ. ಅವರಿಗೆ ಮೇಲ್ಕಂಡಂತಹ ಸಮಸ್ಯೆಗಳು ಉಂಟಾಗುವುದಿಲ್ಲ. ನಮ್ಮ ರಾಜ್ಯದಲ್ಲಿಯೂ ಕೂಡ ಕೇರಳದಂತೆ ಹೆಣ್ಣು ಮಕ್ಕಳು ಶೈಕ್ಷಣಿಕವಾಗಿ ಶಾಲೆಯಲ್ಲಿಯೇ ಮುಂದುವರೆಯ ಬೇಕು.

ಈ ಹಿನ್ನೆಲೆಯಲ್ಲಿ ಪ್ರಸಕ್ತ ಸಂಶೋಧನಾ ಅಧ್ಯಯನವನ್ನು ರೂಪಿಸಿ ಕೈಗೊಳ್ಳಲಾಗಿದೆ. ಈ ಪ್ರಬಂಧದ ಎರಡು ಪ್ರಮುಖ ಉದ್ದೇಶಗಳು ಈ ಕೆಳಕಂಡಂತಿವೆ:

1. ಪ್ರೌಢ ಶಾಲಾ ಹೆಣ್ಣುಮಕ್ಕಳ ಶೈಕ್ಷಣಿಕ ಅಭಿವೃದ್ಧಿ ಪಡಿಸುವಲ್ಲಿ ನಾಗರಿಕಸೇವಾ ಸಂಸ್ಥೆಗಳ ಪಾತ್ರವನ್ನು ಪರೀಕ್ಷಿಸುವುದು.

2. ನಾಗರಿಕ ಸೇವಾ ಸಂಸ್ಥೆಗಳಿಂದ ಪ್ರೌಢ ಶಾಲಾ ಹೆಣ್ಣು ಮಕ್ಕಳಿಗೆ ಆಗಿರುವ ಅನುಕೂಲ ಮತ್ತು ಶೈಕ್ಷಣಿಕ ಬದಲಾವಣೆಗಳನ್ನು ಗುರುತಿಸುವುದು.

**ಸಂಶೋಧನ ವಿಧಾನ**

ಮೈಸೂರು ತಾಲೂಕಿನಲ್ಲಿ ನಗರ ಮತ್ತು ಗ್ರಾಮೀಣ ಪ್ರದೇಶಗಳನ್ನೊಳಗೊಂಡಂತೆ ಒಟ್ಟು 300 ಪೌಢ ಶಾಲೆಗಳಿದ್ದು ಈ ಎರಡು ಪ್ರದೇಶಗಳನ್ನು ಕೇದ್ರಿಕರಿಸಿ ಒಟ್ಟು 30 ಪ್ರೌಢ ಶಾಲೆಗಳಿಂದ ಗ್ರಾಮೀಣ ಮತ್ತು ನಗರ ಪ್ರದೇಶವನ್ನೊಳಗೊಂಡಂತೆ ಸರಳ ಯಾದೃಚ್ಛಿಕ ವಿಧಾನವನ್ನು ಅಳವಡಿಸಿಕೊಂಡು 14ರಿಂದ 16 ವಯೋಮಾನದ ಶೇಕಡ 10 ರಂತೆ ಹೆಣ್ಣು ಮಕ್ಕಳನ್ನು ಆಯ್ಕೆ ಮಾಡಿ ಪ್ರಶ್ನಾವಳಿ, ಸಂದರ್ಶನ ಮತ್ತು ಅವಲೋಕನ ವಿಧಾನದಿಂದ ಅಧ್ಯಯನಕ್ಕಾಗಿ ಮಾಹಿತಿ ಸಂಗ್ರಹಿಸಿ ಸೂಕ್ತ ಸಂಖ್ಯಾಶಾಸ್ತ್ರೀಯ ವಿಧಾನವನ್ನು ಅಳವಡಿಸಿ ಈ ಪ್ರಬಂಧವನ್ನು ಪೂರ್ಣಗೊಳಿಸಲಾಗಿದೆ.

ಪ್ರತಿಬಿಂಬ

PRATIBIMBA – Multidisciplinary Kannada Research Journal of IIMRD

IIMRD JOURNALS

## ಹೆಣ್ಣು ಮಕ್ಕಳ ಶೈಕ್ಷಣಿಕ ಅಭಿವೃದ್ದಿಯಲ್ಲಿ ನಾಗರಿಕ ಸೇವಾ ಸಂಸ್ಥೆಗಳು

ಸರ್ಕಾರಿ ನೌಕರರು ಮಕ್ಕಳು ಶೇಕಡ 15 ರಷ್ಟು, ಖಾಸಗಿ ನೌಕರರು ಹಾಗೂ ಸಣ್ಣ ಪುಟ್ಟ ಕೆಲಸದಲ್ಲಿರುವವರ ಮಕ್ಕಳು ಶೇಕಡ 24 ರಷ್ಟು, ವ್ಯಾಪಾರ–ವ್ಯವಹಾರಸ್ಥರ ಮಕ್ಕಳು ಶೇಕಡ 10 ರಷ್ಟು, ಇನ್ನೂಳಿದಂತಹ 51 ರಷ್ಟು ಮಕ್ಕಳ ಪೋಷಕರು ವ್ಯವಸಾಯ ಮತ್ತು ಕೂಲಿಯನ್ನು ಅವಲಂಬಿಸಿಕೊಂಡಿರುವಂತಹವರ ಮಕ್ಕಳು ಪ್ರೌಢ ಶಾಲೆಯಲ್ಲಿ ಓದುತ್ತಿದ್ದಾರೆ. ಶಾಲೆಯ ಮುಖ್ಯೋಪಾಧ್ಯಾಯರುಗಳು ಶೇಕಡ 10 ರಷ್ಟು ಶೌಚಾಲಯವನ್ನು ನಿರ್ಮಿಸಿ ಕೊಟ್ಟಿದ್ದಾರೆ ಎಂದರೆ, ಶೇಕಡ 15 ರಷ್ಟು ಪೀಠೋಪಕರಣಗಳನ್ನು ಒದಗಿಸಿಕೊಟ್ಟಿದ್ದಾರೆ. ಎಂದರೆ, ಶೇಕಡ 25 ರಷ್ಟು ಮಕ್ಕಳಿಗೆ ಉಚಿತ ಪಠ್ಯ ಪುಸ್ತಕ ದನ ಸಹಾಯ, ಸಮ ವಸ್ತ್ರಗಳನ್ನು ಸ್ವಯಂ ಸೇವಾ ಸಂಸ್ಥೆಯವರು ಮಕ್ಕಳಿಗೆ ಕೊಡಿಸಿದ್ದಾರೆ ಎಂದಿದ್ದಾರೆ.

ಪ್ರೌಢ ಶಾಲಾ ಹೆಣ್ಣು ಮಕ್ಕಳು ಶೇಕಡ 20 ರಷ್ಟು ಉಚಿತ ಪಠ್ಯ ಪುಸ್ತಕ ಹಾಗೂ ಧನ ಸಹಾಯವನ್ನು ಮಾಡಿದ್ದಾರೆ ಎಂದರೆ ನಮ್ಮ ಏರಿಯಾ ಮತ್ತು ನಮ್ಮ ಊರಿನಲ್ಲಿ ರಾತ್ರಿ ಮನೆ ಪಾಠದಿಂದ ನಮಗೆ ಸಹಾಯಕವಾಗಿವೆ ಎಂದು ಶೇಕಡ 30ರಷ್ಟು ಮಕ್ಕಳು ಅಭಿಪ್ರಾಯಿಸಿದರೆ, ಶೇಕಡ 20 ರಿಂದ 30 ರಷ್ಟು ಮಕ್ಕಳು ನಮಗೆ ಆರೋಗ್ಯ ಸುಧಾರಿಸುವಲ್ಲಿ ಸಹಾಯಕರಾಗಿದ್ದಾರೆ ಎಂಬುದನ್ನು ಅಭಿಪ್ರಾಯಿಸಿದ್ದಾರೆ. ನಗರ ಪ್ರದೇಶದ ಶೇಕಡ 60 ರಷ್ಟು ಶಾಲೆಗಳಿಗೆ ಶೈಕ್ಷಣಿಕ ಅಭಿವೃದ್ಧಿಯಲ್ಲಿ ಮುಂದಾದರೆ ಶೇಕಡ 40 ರಷ್ಟು ಗ್ರಾಮೀಣ ಪ್ರದೇಶದ ಶಾಲೆಗಳಲ್ಲಿ ಓದುತ್ತಿರುವ ಮಕ್ಕಳ ಶೈಕ್ಷಣಿಕ ಅಭಿವೃದ್ದಿಯಲ್ಲಿ ನಾಗರಿಕ ಸೇವಾ ಸಂಸ್ಥೆಗಳು ಮುಂದಾಗಿವೆ ಎಂಬುದು ಮಕ್ಕಳ ಮತ್ತು ಶಿಕ್ಷಕರ ಅಭಿಪ್ರಾಯವಾಗಿದೆ.

## ಪ್ರೌಢ ಶಾಲಾ ಹೆಣ್ಣು ಮಕ್ಕಳ ಶೈಕ್ಷಣಿಕ ಬದಲಾವಣೆಗಳು

ಶೇಕಡ 40 ರಷ್ಟು ಹೆಣ್ಣು ಮಕ್ಕಳು ಶೈಕ್ಷಣಿಕವಾಗಿ ಮುಂದುವರಿಕೆಯಲ್ಲಿ ನಮ್ಮ ಪೋಷಕರಿಗೆ ಮನವರಿಕೆ ಮಾಡಿದ್ದರಿಂದ ನಾವು ಶಾಲೆಯಲ್ಲಿ ಮುಂದುವರಿಯುತ್ತಿದ್ದೇವೆ ಎಂದರೆ, ಶೇಕಡ 60 ರಷ್ಟು ಮಕ್ಕಳು ಉಚಿತ ಪಠ್ಯ ಪುಸ್ತಕ ಧನ ಸಹಾಯ ಹಾಗೂ ಉಚಿತವಾಗಿ ಸಮವಸ್ತ್ರ ಕೋಟ್ಟದರಿಂದ ಶೈಕ್ಷಣಿಕವಾಗಿ ಬದಲಾವಣೆ ಹೊಂದಿ ಶಾಲೆಯಲ್ಲಿ ಉಳಿದು ವ್ಯಾಸಂಗ ಮುಂದುವರಿಸಲು ಸಹಾಯಕವಾಗಿದೆ ಎಂದಿದ್ದಾರೆ. ಶೇಕಡ 45 ರಷ್ಟು ಪ್ರೌಢ ಶಾಲಾ ಹೆಣ್ಣು ಮಕ್ಕಳು ಮನೆಯ ರಾತ್ರಿ ಪಾಠದಿಂದ ತುಂಬಾ ಅನುಕೂಲವಾಗಿದೆ ಎಂದು ಅಭಿಪ್ರಾಯಿಸಿದರೆ, ಶೇಕಡ 55 ರಷ್ಟು ಮಕ್ಕಳು ಶಾಲೆಯಲ್ಲಿಯೇ ಬಿಡುವಿನ ವೇಳೆ ಅಂದರೆ ಸಂಜೆ 4 ರ ನಂತರ ವಿಶೇಷ ತರಗತಿಗಳನ್ನು ಸ್ವಯಂ ಸೇವಾ ಸಂಸ್ಥೆಯವರು ಅಯೋಜಿಸುತ್ತಿರುವುದರಿಂದ ನಮ್ಮ ಶೈಕ್ಷಣಿಕ ಬದಲಾವಣೆಗೆ ತುಂಬಾ ಅನುಕೂಲವಾಗಿದೆ ಎಂದು ಅಭಿಪ್ರಾಯಿಸಿದ್ದಾರೆ.

ಸಾಂಸ್ಕೃತಿಕ ಕಾರ್ಯಕ್ರಮ ಮತ್ತು ಪಠ್ಯೇತರ ಚಟುವಟಿಕೆಯಲ್ಲಿ ಭಾಗವಹಿಸುವಂತೆ ಶೇಕಡ 40 ರಷ್ಟು ಮಕ್ಕಳು ನಮಗೆ ಕಾರ್ಯ ಕ್ರಮಕ್ಕೆ ಬೇಕಾದಂತಹ ಪರಿಕರಗಳನ್ನು ಒದಗಿಸಿಲೊಟ್ಟಿದ್ದಾರೆ ಎಂದು ಅಭಿಪ್ರಾಯಿಸಿದರೆ. ಶೇಕಡ 60 ರಷ್ಟು ಮಕ್ಕಳು ಆರೋಗ್ಯ ತಪಾಸಣ ಶಿಬಿರಗಳನ್ನು ಆಗಾಗ ಶಾಲೆಯಲ್ಲಿ ಸ್ವಯಂ ಸೇವಾ ಸಂಸ್ಥೆಯವರುಗಳು ನಡೆಸುತ್ತಿರುವುದರಿಂದ ನಮಗೆ ಪಠ್ಯೇತರ ಚಟುವಟಿಕೆ ಹಾಗೂ ಆರೋಗ್ಯ ಸುದಾರಣೆಗೆ ಸಂಬಂಧಿಸಿದಂತೆ ತುಂಬಾ ಅನುಕೂಲವಾಗುತ್ತಿದೆ ಎಂಬುದನ್ನು ಮಕ್ಕಳು ಅಭಿಪ್ರಾಯಿಸಿದ್ದಾರೆ.

ಶೈಕ್ಷಣಿಕ ಬದಲಾವಣೆಯಲ್ಲಿ ಅನುಕೂಲವಾಗಿದೆ ಎಂದು ಶೇಕಡ 65 ರಷ್ಟು ಮಕ್ಕಳ ಅಭಿಪ್ರಾಯವಾದರೆ ಶೇಕಡ 35 ರಷ್ಟು ಗ್ರಾಮೀಣ ಪ್ರದೇಶದ ಪ್ರೌಢ ಶಾಲಾ ಹೆಣ್ಣು ಮಕ್ಕಳು ಸ್ಥಳೀಯ ಸ್ವಯಂ ಸೇವಾ ಸಂಸ್ಥೆಗಳಿಂದ ತುಂಬಾ ಉಪಯುಕ್ತವಾಗಿದೆ ಎಂಬುದನ್ನು ತಿಳಿಸಿದ್ದಾರೆ.

**ಸಂಶೋಧನಾ ಪಲಿತಾಂಶಗಳು**

1. ಶೇಕಡ 15 ರಷ್ಟು ಸರ್ಕಾರಿ ನೌಕರರ ಶೇಕಡ 24 ರಷ್ಟು ಖಾಸಗಿ ನೌಕರರ ಮತ್ತು ಸಣ್ಣ ಪುಟ್ಟ ಕೆಲಸದಲ್ಲಿರುವ ಪೋಷಕರ ಮಕ್ಕಳಿದ್ದಾರೆ. ಶೇಕಡ 10 ರಷ್ಟು ಸಣ್ಣ ಪುಟ್ಟ ವ್ಯಾಪಾರಸ್ಥರ ಮಕ್ಕಳು ಹಾಗೂ ಶೇಕಡ 51 ರಷ್ಟು ಮಕ್ಕಳ ಪೋಷಕರು ವ್ಯವಸಾಯ ಮತ್ತು ಕೂಲಿಯನ್ನು ಅವಲಂಬಿಸಿ ಕೊಂಡಿರುವಂತಹ ಪೋಷಕರ ಮಕ್ಕಳಿದ್ದಾರೆ.
2. ಶೇಕಡ 25 ರಷ್ಟು ಶಾಲೆಗಳಲ್ಲಿ ಉಚಿತ ಪಠ್ಯ ಪುಸ್ತಕ ಧನ ಸಹಾಯ ಸಮವಸ್ತ್ರಗಳನ್ನು ವಿತರಿಸಿದ್ದಾರೆ. ಎಂದರೆ ಶೇಕಡ 10 ರಷ್ಟು ಶೌಚಾಲಾಯ ನಿರ್ಮಾಣ ಹಾಗೂ ಶೇಕಡ 15 ರಷ್ಟು ಪೀಠೋಪಕರಣಗಳನ್ನು ಶಾಲೆಗೆ ಒದಗಿಸಿ ಕೊಟ್ಟಿದ್ದಾರೆ. ಎಂಬುದು ಮುಖ್ಯೋಪಾಧ್ಯಾಯರ ಅಭಿಪ್ರಾಯವಾಗಿದೆ.
3. ಶೇಕಡ 20 ರಷ್ಟು ಮಕ್ಕಳು ಕೆಲವು ನಮಗೆ ವ್ಯಾಸಂಗಕ್ಕೆ ಅವಶ್ಯಕವಾದಂತಹ ಸೌಲಭ್ಯಗಳನ್ನು ಒದಗಿಸಿದ್ದಾರೆ ಎಂದರೆ, ಶೇಕಡ 30 ರಷ್ಟು ಮನೆ ಪಾಠದ ಸೌಲಭ್ಯ ಒದಗಿಸಿದ್ದರಿಂದ ಸಹಾಯಕವಾಗಿದೆ ಎಂದರೆ, ಶೇಕಡ 20 ರಿಂದ 80 ರಷ್ಟು ಮಕ್ಕಳು ಆರೋಗ್ಯ ಸುಧಾರಿಸುವಿಕೆಯಲ್ಲಿ ಮುಂದಾಗುತ್ತಿವೆ ಎಂದಿದ್ದಾರೆ.
4. ಶೇಕಡ 60 ರಷ್ಟು ನಗರ ಪ್ರದೇಶದ ಶಾಲೆಗಳಲ್ಲಿ, ಶೇಕಡ 40 ರಷ್ಟು ಗ್ರಾಮೀಣ ಪ್ರದೇಶದ ಶಾಲೆಗಳಲ್ಲಿನ ಮಕ್ಕಳು ಮತ್ತು ಶಿಕ್ಷಕರು–ಸ್ವಯಂ ಸೇವಾ ಸಂಸ್ಥೆಗಳು ಮಕ್ಕಳ ಶೈಕ್ಷಣಿಕ ಅಭಿವೃದ್ದಿಯಲ್ಲಿ ಮುಂದಾಗಿವೆ ಎಂದಿದ್ದಾರೆ.
5. ಶೇಕಡ 40 ರಷ್ಟು ಮಕ್ಕಳು ನಮ್ಮ ಪೋಷಕರಿಗೆ ತಿಳುವಳಿಕೆ ನೀಡಿದ್ದರಿಂದ ಶಾಲೆಯಲ್ಲಿಯೇ ಉಳಿಯಲು ಅವಕಾಶವಾಯಿತೆಂದರೆ, ಶೇಕಡ 60 ರಷ್ಟು ಮಕ್ಕಳು ವಿವಿಧ ಸೌಲಭ್ಯಗಳನ್ನು ಒದಗಿಸಿದ್ದರಿಂದ ಶೈಕ್ಷಣಿಕವಾಗಿ ಬದಲಾವಣೆ ಹೊಂದಲು ಅವಕಾಶವಾಗಿದೆ ಎಂದಿದ್ದಾರೆ.
6. ಸಂಜೆಯ ವೇಳೆ ಮನೆ ಪಾಠದಿಂದ ಅನುಕೂಲವಾಗಿದೆ. ಎಂದು ಶೇಕಡ 45 ರಷ್ಟು ಶಾಲಾ ಅವಧಿ ಮುಗಿದ ನಂತರ [ಸಂಜೆ 4 ರ ನಂತರ] ಶೇಕಡ 25 ರಷ್ಟು ಮಕ್ಕಳು ವಿಶೇಷ ತರಗತಿಗಳು ನಡೆಯುತ್ತಿವೆ ಎಂದಿದ್ದಾರೆ.
7. ಪಠ್ಯೇತರ ಚಟುವಟಿಕೆಯಲ್ಲಿ ಶೇಕಡ 40 ರಷ್ಟು ಮಕ್ಕಳು ನಮ್ಮ ಭಾಗವಹಿಸುವಿಕೆಯಲ್ಲಿ ಅನುಕೂಲವಾಗಿದೆ ಎಂದರೆ ಶೇಕಡ 60 ರಷ್ಟು ಮಕ್ಕಳು ಆರೋಗ್ಯ ತಪಾಸಣೆಯಿಂದ ತುಂಬಾ ಅನುಕೂಲವಾಗಿದೆ ಎಂದಿದ್ದಾರೆ.
8. ಶೇಕಡ 20 ರಷ್ಟು ನಗರ ಪ್ರದೇಶದ ಶಾಲೆಗಳಿಗೆ ಹಾಗೂ ಶೇಕಡ 10 ರಷ್ಟು ಗ್ರಾಮೀಣ ಪ್ರದೇಶದ ಶಾಲೆಗಳಲ್ಲಿ ಸ್ವಯಂ ಸೇವಾ ಸಂಸ್ಥೆಗಳು ಹೆಣ್ಣು ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗೆ ಸಂಬಂದಿಸಿದಂತೆ ಪ್ರಸ್ತುತದಲ್ಲಿಯೂ ಕಾರ್ಯನಿರ್ವಹಿಸುತ್ತಿವೆ.

ಪ್ರತಿಬಿಂಬ

PRATIBIMBA – Multidisciplinary Kannada Research Journal of IIMRD

IIMRD JOURNALS

**ಸಂಶೋಧನಾ ಸಲಹೆಗಳು**

1. ಹೆಚ್ಚು ಗ್ರಾಮೀಣ ಪ್ರದೇಶದ ಹೆಣ್ಣು ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗೆ ಸರ್ಕಾರ ಮತ್ತು ಸರ್ಕಾರೇತರ ಸಂಘ ಸಂಸ್ಥೆಗಳು ಮುಂದಾಗಬೇಕು.
2. ಸರ್ಕಾರಿ ಮತ್ತು ಸರ್ಕಾರೇತರ ಸಂಘ ಸಂಸ್ಥೆಗಳು ರೂಪಿಸುವಂತಹ ಕಾರ್ಯ ಕ್ರಮಗಳು ಏಕ ಪ್ರಕಾರವಾಗಿ ಎಲ್ಲಾ ಶಾಲೆಗಳಿಗೂ ಸಂಪೂರ್ಣವಾಗಿ ಲಭ್ಯವಾಗಬೇಕು.
3. ಸ್ವಯಂ ಸೇವಾ ಸಂಸ್ಥೆಗಳು ಮಕ್ಕಳ ಆರೋಗ್ಯ ಸಂಬಂದಿ ಸಮಸ್ಯೆಗಳಿಗೆ ಹೆಚ್ಚು ಒತ್ತು ಕೂಡುವ ಕಡೆ ಲಿಗಾವಹಿಸಬೇಕು.
4. ಸರ್ಕಾರಿ ಅನುಧಾನಿತ ಹಾಗೂ ಕೆಲವು ಶಾಲೆಗಳಲ್ಲಿ ಓದುತ್ತಿರುವ ಪ್ರೌಢ ಶಾಲಾ ಹೆಣ್ಣು ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗೆ ಸರ್ಕಾರ ಮತ್ತು ಸರ್ಕಾರೇತರ ಸಂಘ ಸಂಸ್ಥೆಗಳು ಗಮನ ಹೆರಿಸಬೇಕು.
5. ಪ್ರೌಢ ಶಾಲಾ ಹೆಣ್ಣು ಮಕ್ಕಳ ಆರೋಗ್ಯ ಸುಚಿತ್ವ ದೇಹ ಮತ್ತು ಬದುಕಿನ ಬಗ್ಗೆ ಶಿಕ್ಷಣ ಕೊಡಲು ನಾಗರೀಕ ಸೇವಾ ಸಂಸ್ಥೆಗಳು ಮುಂದಾಗಬೇಕು.
6. ಮಕ್ಕಳನ್ನು ಶಾಲೆಯಲ್ಲಿಯೇ ಉಳಿಯುವಂತೆ ಮಾಡಲು ಪೋಷಕರಿಗೆ ಕಾರ್ಯಗಾರಗಳನ್ನು ರೂಪಿಸಲು ನಾಗರಿಕ ಸೇವಾ ಸಂಸ್ಥೆಗಳು ಗಮನಹರಿಸಬೇಕು.

**ಪರಾಮರ್ಶನ ಗ್ರಂಥಗಳು**


- ಇಂದಿರಾ,ಆರ್. **ಮಹಿಳೆ, ಸಮಾಜ ಮತ್ತು ಸಂಸ್ಕೃತಿ**. ಹಂಪಿ: ಕನ್ನಡ ವಿಶ್ವವಿದ್ಯಾನಿಲಯ, 2002.
- ಕಾಶಿನಾಥ್,ಎಚ್.ಎಂ. **ರಾಷ್ಟೀಯ ಶಿಕ್ಷಣ ನೀತಿ, 1986. ಪ್ರಗತಿ ಪರಿಶೀಲನೆ**. ಗದಗ: ತ್ರಪ್ತಿ ಪ್ರಕಾಶನ, 1999.
- ಚಂದ್ರಶೇಖರ್,ಟಿ.ಆರ್. **ಕರ್ನಾಟಕದಲ್ಲಿ ಪ್ರಾದೇಶಿಕ ಅಸಮಾನತೆ ಮತ್ತು ಉನ್ನತಾಧಿಕಾರ ಸಮಿತಿ** ಹಂಪಿ, ಕನ್ನಡ ವಿಶ್ವವಿದ್ಯಾನಿಲಯ, 2008.
- ನಾಗರಾಜು,ಟಿ. **ಭಾರತದಲ್ಲಿ ಶಿಕ್ಷಣ ಮತ್ತು ಸಮಾಜ. ಮೈಸೂರು:** ಚೇತನ್ ಬುಕ್‌ಹೌಸ್, 2005.
- ನಾಯಕ್, ಎಸ್.ಪಿ **ಎಜುಕೇಷನ್ ಆಫ್ ಟ್ವೆಂಟಿ ಫಸ್ಟ್ ಸೆಂಚುರಿ**. ನ್ಯೂಡೆಲ್ಲಿ: ಅನ್ನಮಾಲು ಪಬ್ಲಿಕೇಷನ್, 1998.
- ಪ್ರಶಾಂತ,ಎಚ್.ಡಿ. **ಶಿಕ್ಷಣದ ಸಾರ್ವತ್ರೀಕರಣ, ದಲಿತ ಮಕ್ಕಳ ಸ್ಥಿತಿ–ಗತಿ**. ಮೈಸೂರು: ಪ್ರಸಾರಾಂಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, 2009.
- ಮುಖರ್ಜಿ, ಎಸ್.ಎನ್. **ಇಸ್ಟರಿ ಆಫ್ ಎಜುಕೇಷನ್ ಇನ್ ಇಂಡಿಯಾ**. ಬರೋಡಾ: ಆಚಾರ್ಯ ಬುಕ್ ಡಿಪೋ, 1956.